

## ಒಲಿಂಪಿಕ್ಸ್ ಮಹಾಕೂಟದ ಬೆಳಕು

ನಾಗರಿಕತೆಯ ಘನತೆಯನ್ನು ಎತ್ತಿ ಹಿಡಿಯುವ ವರ್ಷದ ಪ್ರಮುಖ ಘಟನಾವಳಿಗಳಲ್ಲಿ ಒಲಿಂಪಿಕ್ಸ್ ಕ್ರೀಡಾಕೂಟವೂ ಒಂದು. ಜುಲೈ 26ರಿಂದ ಆಗಸ್ಟ್ 11ರವರೆಗೆ ಪ್ಯಾರಿಸ್‌ನಲ್ಲಿ ನಡೆದ ಮನುಕುಲದ ಮಹಾನ್ ಕ್ರೀಡಾಕೂಟದಲ್ಲಿ ಭಾರತದ 117 ಅಥ್ಲೀಟ್‌ಗಳು ಭಾಗವಹಿಸಿದರು; ಒಂದು ಬೆಳ್ಳಿ ಹಾಗೂ ಐದು ಕಂಚು ಸೇರಿ ಆರು ಪದಕಗಳನ್ನು ಗೆದ್ದುಕೊಂಡರು.

ಮನು ಭಾಕರ್ ಕಂಚು ಜಯಿಸುವ ಮೂಲಕ ಶೂಟಿಂಗ್‌ನಲ್ಲಿ ಈ ಸಾಧನೆ ಮಾಡಿದ ದೇಶದ ಮೊದಲ ಮಹಿಳಾ ಶೂಟರ್ ಎನ್ನುವ ಹಿರಿಮೆಗೆ ಪಾತ್ರರಾದರು. 10 ಮೀಟರ್ ಏರ್ ಪಿಸ್ತೂಲ್‌ನಲ್ಲಿ ಕಂಚಿನ ಸಾಧನೆಯ ಜೊತೆಗೆ, ಅದೇ ವಿಭಾಗದ ಮಿಶ್ರ ತಂಡದಲ್ಲಿ ಸರಬ್ಜೋತ್ ಸಿಂಗ್ ಜೊತೆಗೆ ಕಂಚು ಜಯಿಸಿದರು. ಈ ಮೂಲಕ ಸ್ವಾತಂತ್ರ್ಯ ನಂತರ ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದ ಮೊದಲ ಭಾರತೀಯ ಕ್ರೀಡಾಪಟು ಎನ್ನುವ ಗೌರವ ಮನು ಭಾಕರ್ ಅವರದಾಯಿತು. ಸ್ವಪ್ನಿಲ್ ಕುಸಾಲೆ ಶೂಟಿಂಗ್‌ನಲ್ಲಿ ಕಂಚು ಪಡೆದರೆ, ಜಾವೆಲಿನ್ ಎಸೆತದಲ್ಲಿ ನೀರಜ್ ಚೋಪ್ರಾ ಬೆಳ್ಳಿ ಪಡೆದುಕೊಂಡರು. ಭಾರತೀಯ ಪುರುಷರ ಹಾಕಿ ತಂಡ ಕಂಚು ಗಳಿಸಿ ಮಿಂಚಿತು.

ಕುಸ್ತಿ ಸ್ಪರ್ಧೆಯಲ್ಲಿ ಕಂಚು ಗೆದ್ದ ಹರಿಯಾಣದ ಅಮನ್ ಶೆರಾವತ್ ಅವರಿಗೆ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ದೇಶದ ಕಿರಿಯ ಎನ್ನುವ ಗೌರವ. 57 ಕೆ.ಜಿ. ಫ್ರೀಸ್ಟೈಲ್ ವಿಭಾಗದಲ್ಲಿ ಪದಕ ಜಯಿಸಿದಾಗ ಅಮನ್ ವಯಸ್ಸು 21 ವರ್ಷ 24 ದಿನ. ಈ ಮೂಲಕ ಅವರು ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು (21 ವರ್ಷ 45 ದಿನ) ಹೆಸರಿನಲ್ಲಿದ್ದ ಕಿರಿಯ ಕ್ರೀಡಾಪಟು ಗೌರವ ತಮ್ಮದಾಗಿಸಿಕೊಂಡರು. ದೇಹತೂಕದಲ್ಲಿ 100 ಗ್ರಾಂ ಹೆಚ್ಚಾಗಿದ್ದರಿಂದ ವಿನೇಶ್ ಫೋಗಟ್ ಕುಸ್ತಿ ಫೈನಲ್‌ನಿಂದ ಅನರ್ಹಗೊಂಡು ಪದಕ ಜಯಿಸುವ ಅವಕಾಶ ಕಳೆದುಕೊಂಡದ್ದು ಪದಕದ ಸಾಧನೆಗಿಂತಲೂ ಹೆಚ್ಚಿನ ಸುದ್ದಿ ಮಾಡಿತು.

## ‘ಬುಲ್ಡೋಜರ್ ನ್ಯಾಯ’ಕ್ಕೆ ಸುಪ್ರೀಂ ಅಂಕುಶ

ಆರೋಪಿಯನ್ನು ಅಪರಾಧಿಯೆಂದು ಭಾವಿಸಿ, ಆತನ ಆಸ್ತಿಯನ್ನು ಬುಲ್ಡೋಜರ್ ಬಳಸಿ ಧ್ವಂಸಗೊಳಿಸುವ ಕಾರ್ಯಾಂಗದ ಅತ್ಯುತ್ಸಾಹಕ್ಕೆ ಸುಪ್ರೀಂ ಕೋರ್ಟ್ ಅಂಕುಶ ವಿಧಿಸಿರುವುದು ನ್ಯಾಯಾಂಗಕ್ಕೆ ಸಂಬಂಧಿಸಿದಂತೆ ವರ್ಷದ ಮಹತ್ವದ ವಿದ್ಯಮಾನಗಳಲ್ಲೊಂದು. ‘ಬುಲ್ಡೋಜರ್ ನ್ಯಾಯ’ವನ್ನು ಕಾನೂನಿನ ಅಸ್ತಿತ್ವಕ್ಕೆ ಬೆಲೆಯನ್ನೇ ನೀಡದ ‘ಅರಣ್ಯ ನ್ಯಾಯ’ದೊಂದಿಗೆ ಹೋಲಿಸಿರುವ ಸುಪ್ರೀಂ ಕೋರ್ಟ್, ಕಟ್ಟಡಗಳ ಧ್ವಂಸಕ್ಕೆ ಸಂಬಂಧಿಸಿದಂತೆ ಇಡೀ ದೇಶಕ್ಕೆ ಅನ್ವಯವಾಗುವ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ನೋಟಿಸ್ ನೀಡದೇ ಯಾವ ಕಟ್ಟಡವನ್ನೂ ಧ್ವಂಸಗೊಳಿಸುವಂತಿಲ್ಲ ಹಾಗೂ ನೋಟಿಸ್ ನೀಡಿದ ನಂತರ ಅದಕ್ಕೆ ಉತ್ತರ ನೀಡಲು ಸಂಬಂಧಪಟ್ಟ ವ್ಯಕ್ತಿಗೆ 15 ದಿನಗಳ ಕಾಲಾವಕಾಶ ನೀಡಬೇಕು ಎಂದು ಕೋರ್ಟ್ ಹೇಳಿದೆ.

ಕಾರ್ಯಾಂಗದ ಅಧಿಕಾರಿಗಳು ನ್ಯಾಯಾಧೀಶರಾಗಲು ಅವಕಾಶ ಇಲ್ಲ. ಆರೋಪಿಯೊಬ್ಬ ಅಪರಾಧಿ ಎಂದು ತೀರ್ಮಾನಿಸಿ, ಆತನ ಆಸ್ತಿಯನ್ನು ಧ್ವಂಸಗೊಳಿಸುವ ಮೂಲಕ ಶಿಕ್ಷೆ ವಿಧಿಸಲು ಅಧಿಕಾರಿಗಳಿಗೆ ಅಧಿಕಾರವಿಲ್ಲ. ಈ ರೀತಿ ಮಾಡುವುದು ಅಧಿಕಾರದ ವ್ಯಾಪ್ತಿಯನ್ನು ಮೀರಿದಂತೆ ಎಂದು ಸ್ಪಷ್ಟಪಡಿಸಿರುವ ಸುಪ್ರೀಂ ಕೋರ್ಟ್, ವ್ಯಕ್ತಿ ಆರೋಪಿ ಎಂಬ ಕಾರಣಕ್ಕೆ ಆತನಿಗೆ ಸೇರಿದ ಕಟ್ಟಡ ಧ್ವಂಸಗೊಳಿಸುವುದು ಅರಾಜಕತೆ ಎಂದಿದೆ.

## ವಿಶ್ವವನ್ನು ಕಂಗೆಡಿಸಿದ ‘ಬಿಸಿ ಅಲೆ’

ತಾಪಮಾನದ ವೈಪರೀತ್ಯ ಸುಡುಬೇಸಿಗೆ ಹಾಗೂ ರಣ ಮಳೆಯ ರೂಪದಲ್ಲಿ ವಿಶ್ವವನ್ನು ಕಾಡುತ್ತಿರುವುದಕ್ಕೆ 2024 ನಿದರ್ಶನವಾಯಿತು. ಭಾರತದ ಕೆಲವು ಪ್ರದೇಶಗಳು ಸೇರಿದಂತೆ ವಿಶ್ವದ ವಿವಿಧೆಡೆ 50 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚಿನ ತಾಪಮಾನ ದಾಖಲಾಯಿತು. ಹಜ್ ಯಾತ್ರಿಕರು ಕೂಡ ಬಿಸಿ ಅಲೆಗಳಿಂದ ತತ್ತರಿಸಿದ್ದು, ಜೂನ್ ತಿಂಗಳಲ್ಲಿ ಸಾವಿರಾರು ಯಾತ್ರಿಕರು ಮೆಕ್ಕಾದಲ್ಲಿ ಸಾವಿಗೀಡಾಗಿದ್ದಾರೆ. ಈ ವರ್ಷ ಗರಿಷ್ಠ 51.8 ಡಿಗ್ರಿ ಸೆಲ್ಸಿಯಸ್ ತಾಪಮಾನ ಮೆಕ್ಕಾದಲ್ಲಿ ದಾಖಲಾಗಿದೆ.

ಭಾರತದಲ್ಲಿ ಉತ್ತರ, ಮಧ್ಯ ಮತ್ತು ಪೂರ್ವ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದ ಬಿಸಿಗಾಳಿ ಕಂಡುಬಂತು. ರಾಜಸ್ಥಾನ, ಗುಜರಾತ್, ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ಒಡಿಶಾಗಳಲ್ಲಿ ಶಾಖದ ಅಲೆಗಳ ಪ್ರಭಾವ ಹೆಚ್ಚಾಗಿತ್ತು. ದೆಹಲಿಯಲ್ಲಿ 52.3 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ಕೇಂದ್ರ ಸರ್ಕಾರ ‘ಹೀಟ್ ವೇವ್ ಅಡ್ವೈಸರಿ’ ಬಿಡುಗಡೆ ಮಾಡುವ ಮೂಲಕ, ಬಿಸಿಗಾಳಿ ಹಾಗೂ ನಿರ್ಜಲೀಕರಣ ಸಂಬಂಧಿತ ಕಾಯಿಲೆಗಳ ತಡೆಗೆ ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಪ್ರಯತ್ನಿಸಿತು.

## ತುಂಗಭದ್ರಾ ಜಲಾಶಯದಲ್ಲೊಂದು ಜಾದೂ



ತುಂಗಭದ್ರಾ ಜಲಾಶಯದಲ್ಲಿ ಮುಂಗಾರಿನ ಉತ್ತರ್ಷದಿಂದಾಗಿ ಆಗಸ್ಟ್ ತಿಂಗಳಲ್ಲಿ ಅನಿರೀಕ್ಷಿತ ಆಘಾತ ಕಾಣಿಸಿಕೊಂಡಿತು. ಕೊಪ್ಪಳ, ರಾಯಚೂರು, ಬಳ್ಳಾರಿ ಹಾಗೂ ನೆರೆಯ ಆಂಧ್ರಪ್ರದೇಶದ ಕಡಪಾ, ಕರ್ನೂಲು ಜಿಲ್ಲೆಗಳ ರೈತರ ಪಾಲಿಗೆ ತುಂಗಭದ್ರಾ ನದಿ ಜೀವನಾಡಿ. ಈ ನದಿಗೆ ಹೊಸಪೇಟೆ–ಕೊಪ್ಪಳದ ನಡುವೆ ನಿರ್ಮಿಸಲಾದ ಜಲಾಶಯದಲ್ಲಿ ನೀರಿನ ಸಂಗ್ರಹ ಹೆಚ್ಚಳಗೊಂಡಾಗ ರೈತರ ಕಣ್ಣುಗಳಲ್ಲಿ ಸಹಜವಾಗಿಯೇ ಹೊಳಪು ಕಾಣಿಸಿಕೊಂಡಿತು. ಆದರೆ, ಜಲಾಶಯದ 19ನೇ ಕ್ರೆಸ್ಟ್ ಗೇಟ್‌ನ ಚೈನ್ ಕೊಂಡಿ ಕಳಚಿಹೋಗಿ, ಗೇಟ್ ತನ್ನ ಸ್ಥಾನದಿಂದ 100 ಮೀಟರ್ ದೂರ ಹೋಗಿ ಬಿತ್ತು. ಅಪಾರ ಪ್ರಮಾಣದ ನೀರು ವ್ಯರ್ಥವಾಗುವ ಆತಂಕ ತಲೆದೋರಿತು. ಆಗ ತಜ್ಞ ಕನ್ನಯ್ಯ ನಾಯ್ಡು ನೇತೃತ್ವದಲ್ಲಿ ನೂರಾರು ಕಾರ್ಮಿಕರ ತಂಡ ಶ್ರಮವಹಿಸಿ ಕೇವಲ ಐದು ದಿನಗಳಲ್ಲಿ ಗೇಟು ದುರಸ್ತಿಗೊಳಿಸಿ, ಗಣನೀಯ ಪ್ರಮಾಣದಲ್ಲಿ ನೀರು ಪೋಲಾಗುವುದನ್ನು ತಡೆಯಿತು. ತಂತ್ರಜ್ಞರು, ಕಾರ್ಮಿಕರ ಈ ಅಸಾಧಾರಣ ಯಶಸ್ಸು ಕನ್ನಡಿಗರ ಸಂತಸಕ್ಕೆ ಕಾರಣವಾಯಿತು.

ಕ್ರೆಸ್ಟ್ ಗೇಟ್ ದುರಸ್ತಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಕನ್ನಯ್ಯ ನಾಯ್ಡು ಅವರಿಗೆ ರಾಜ್ಯ ಸರ್ಕಾರ ‘ರಾಜ್ಯೋತ್ಸವ ಪ್ರಶಸ್ತಿ’ ನೀಡಿ ಗೌರವಿಸಿತು.